6) When will this project be completed?

Sri H.D. Revanna (Public Works and Energy Minister) :

1) In Bangalore Mysore Infrastructure Corridor Project the following road construction works are being taken up by NICEL

Express Way :111. 00 K.M.

Peripheral Road : 41.00 K.M

Link Road : 9.80 K.M

2) The project road works are under progress

3) Yes

4) 41.00 KM of peripheral road and 9.90 KM of Link Road are being constructed.

5) So far the Government has not taken back any lands

6) It is being taken up in phases

336 (650) ಶ್ರೀ ದಿನೇಶ್ ಗುಂಡೂರಾವ್, ಎಂ.ಎಲ್.ಎ (ಗಾಂಧಿನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 2004–05, 2005–06 ಹಾಗೂ 2006–07ರಲ್ಲಿ ವರದಿಯಾಗಿರುವ ಬೀದಿನಾಯಿ ಕಚ್ಚಿರುವ ಪ್ರಕರಣಗಳೆಷ್ಟು;

ಆ) ಇವುಗಳಲ್ಲಿ ರೇಬೀಸ್ ಕಾಯಿಲೆ ತಗುಲಿರುವ ಪ್ರಕರಣಗಳೆಷ್ಟು ಹಾಗೂ ಈ ಕಾಯಿಲೆಯಿಂದ ಮರಣ ಹೊಂದಿರುವವರ ಸಂಖ್ಯೆ ಎಷ್ಟು;

ಇ) ಬೀದಿ ನಾಯಿಗಳ ಹಾವಳಿಯನ್ನು ಮಹಾನಗರ ಪಾಲಿಕೆ ನಿಯಂತ್ರಿಸದಿರಲು ಕಾರಣಗಳೇನು;

ಈ) ಈ ಬೀದಿ ನಾಯಿಗಳನ್ನು ನಿಯಂತ್ರಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು;

ಉ) ಬೆಂಗಳೂರು ನಗರದಲ್ಲಿ ರೇಬೀಸ್ ಕಾಯಿಲೆ ಹರಡದಂತೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು):

ಅ)

ವರ್ಷ	ಬೀದಿ ನಾಯಿ
2004–05	16747
2005–06	15363
2006–07 ಡಿಸೆಂಬರ್ ತನಕ (9ತಿಂಗಳಿಗೆ)	7875

ಆ) ಇದರಲ್ಲಿ 2004–05ನೇ ಸಾಲಿನಲ್ಲಿ 2 ರೇಬೀಸ್ ತಗುಲಿದ ಪ್ರಕರಣಗಳು ವರದಿಯಾಗಿದ್ದು. ಇಬ್ಬರು ಮೃತಪಟ್ಟಿರುತ್ತಾರೆ. 2005–06 ಮತ್ತು 2006–07ನೇ ಸಾಲಿನಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಯಾವುದೇ ರೇಬೀಸ್ ಪ್ರಕರಣ ವರದಿಯಾಗಿರುವುದಿಲ್ಲ.

ಇ) ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಬೀದಿ ನಾಯಿಗಳನ್ನು Prevention of Cruelty to Animal Act, 1960 ಮತ್ತು ಅದರದೇ ಆದ Animal Birth Control Rule (Dogs) 2001ರ ಅಡಿಯಲ್ಲಿ ಸತತವಾಗಿ ನಿಯಂತ್ರಿಸಲಾಗುತ್ತಿದೆ.

ಈ) ಬೆಂಗಳೂರು ಮಹಾನಗರ ಪಾಲಿಕೆ 2001 ರಿಂದ Animal Birth Control Rule (Dogs) 2001ರ ಅಡಿಯಲ್ಲಿ ಬೀದಿ ನಾಯಿಗಳ ನಿಯಂತ್ರಣಕ್ಕಾಗಿ ಬೀದಿ ನಾಯಿಗಳ ಸಂತಾನಹರಣ ಶಸ್ತ್ರಚಿಕಿತ್ಸೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಇದನ್ನು ಇನ್ನೂ ತೀವ್ರಗೊಳಿಸುವುದು ಮತ್ತು ನಿಯಮಾನುಸಾರ ಕಾನೂನಿನ ಅಡಿಯಲ್ಲಿ ಎಲ್ಲಾ ಸಮಸ್ಯಾತ್ಮಕ ನಾಯಿಗಳಿಗೆ ದಯಾಮರಣ ನೀಡಲಾಗುವುದು.

ಉ) ಬೆಂಗಳೂರು ನಗರದಲ್ಲಿ ರೇಬೀಸ್ ಕಾಯಿಲೆ ತಡೆಗಟ್ಟಲು ನಗರ ಪಾಲಿಕೆಯಿಂದ ಬೀದಿ ನಾಯಿಗಳಿಗೆ ವರ್ಷಕ್ಕೊಮ್ಮೆ ರೇಬೀಸ್ ಲಸಿಕೆ ಹಾಕಲಾಗುತ್ತಿದೆ. ಸಾಕು ನಾಯಿಗಳನ್ನು ಪರವಾನಗಿಗೊಳಪಡಿಸಲಾಗುತ್ತಿದೆ. ಮತ್ತು ನಾಯಿ ಕಡಿತಕ್ಕೊಳಗಾದವರಿಗೆ ಉಚಿತವಾಗಿ ರೇಬೀಸ್ ಲಸಿಕೆ ನೀಡಲಾಗುತ್ತಿದೆ.